ದಿನಾಂಕಃ 29.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ **9** ಮತ್ತು **11** ನೇ ಪ್ರತಿವಾದಿ ಪರ ಶ್ರೀ ಕೆ ಎಂ ಪಿ ವಕೀಲರಿಂದಃ

ನಾನು ಬಿ ಎಸ್ ಸಿ , ಎಲ್ ಎಲ್ ಬಿ ಓದಿದ್ದೇನೆ . ನಾನು ವಕೀಲ ವೃತ್ತಿ ಮಾಡುತ್ತೇನೆ . ದಿ ಃ 17.11.2004 ರಂದು ವಿಭಾಗ ಪತ್ರವಾಗಿತ್ತು . ನಮ್ಮ ತಂದೆ 2000 ನೇ ಇಸವಿಯಲ್ಲಿ ಮರಣ ನಂತರ ನಾನು , ನನ್ನ ತಾಯಿ , ಪ್ರತಿವಾದಿ ನರಸಿಂಹಯ್ಯರವರ ನಡುವೆ ವಿಭಾಗ ಪತ್ರವಾಗಿತ್ತು . ವಿಭಾಗ ಪತ್ರದಂತೆ ಒಟ್ಟು 12000 ಚದುರಡಿ ನನ್ನ ಭಾಗಕ್ಕೆ ಬಂದಿತ್ತು . 12000 ಚದುರಡಿ ಯಾವ ಯಾವ ಸೈಟು ಎಂದರೆ 3 , 4 , 5 , 6 , 7 , 9 , 11 ಆಗಿರುತ್ತದೆ . ವಿಭಾಗ ಪತ್ರದಲ್ಲಿ ಇರುವ ಅಂಶಗಳು ನನಗೆ ಗೊತ್ತಿದೆ . ದಾವಾ ಸ್ವತ್ತಿನ ಷೆಡ್ಯೂಲು ಎ ಸ್ವತ್ತು ನಿಮಗೆ ಬಂದಿದೆಯೇ ಎಂದರೆ ಷೆಡ್ಯೂಲು ಎ ಸ್ವತ್ತು ಒಟ್ಟು ಸ್ವತ್ತು ಅಂದರೆ ಅದರಲ್ಲಿ ಷೆಡ್ಯೂಲು ಬಿ , ಸಿ ಮತ್ತು ಡಿ ಷೆಡ್ಯೂಲ್ ನ ಸ್ವತ್ತುಗಳು ಸೇರಿದೆ ಅದರಲ್ಲಿ ಷೆಡ್ಯೂಲು ಸಿ ಸ್ವತ್ತು ನನ್ನ ಭಾಗಕ್ಕೆ ಬಂದಿದೆ .

ವಾದ ಪತ್ರದ ಷೆಡ್ಯೂಲು ಡಿ ಸ್ವತ್ತುನ್ನು ಒಟ್ಟಾಗಿ ಉಳಿಸಿಕೊಳ್ಳಲಾಗಿದೆ . ಆ ರೀತಿ ಒಟ್ಟಾಗಿ ಉಳಿಸಿಕೊಳ್ಳಲು ಕಾರಣವೇನಿತ್ತು ಎಂದರೆ ಮೊದಲು ಷೆಡ್ಯೂಲು ಬಿ ಸ್ವತ್ತು ಮತ್ತು ಸಿ ಸ್ವತ್ತು ನ್ನು ವಿಭಾಗ ಮಾಡಿಕೊಂಡು ನಂತರ ಷೆಡ್ಯೂಲು ಡಿ ಯನ್ನು ವಿಬಾಗ ಮಾಡಿಕೊಳ್ಳೋಣ ಎಂದು ಮಾತಾಗಿತ್ತು . ಉಳಿಕೆ ಡಿ - ಷೆಡ್ಯೂಲು ಸ್ವತ್ತಿನಲ್ಲಿ 32 ಸೈಟುಗಳು ಇವೆ. ಈಗ ಷೆಡ್ಯೂಲು ಡಿ ಸ್ವತ್ತು ನಮ್ಮ ಸ್ವಾಧೀನದಲ್ಲಿ ಇದೆ . ಡಿ ಶೆಡ್ಯೂಲು ಸ್ವತ್ತು ನಿಮ್ಮ ಸ್ವಾಧೀನದಲ್ಲಿ ಆಗಲೀ ಪ್ರತಿವಾದಿ ನರಸಿಂಹಯ್ಯರವರ ಸ್ವಾಧೀನದಲ್ಲಿ ಆಗಲೀ ಬೇರೆ 3 ನೇ ವ್ಯಕ್ತಿಯ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ಷೆಡ್ಯೂಲು ಡಿ ಸ್ವತ್ತು ನಿಮ್ಮ ಮತ್ತು ಪ್ರತಿವಾದಿಯ ಸ್ವಾ ದೀನದಲ್ಲಿ ಇಲ್ಲದಿದ್ದ ಕಾರಣ ವಿಭಾಗ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನರಸಿಂಹಯ್ಯ ರವರು ಹಾಕಿರುವ ಪ್ರತಿವಾದ ಪತ್ರದ ಅಂಶಗಳು ನನಗೆ ಗೊತ್ತಿದೆ .

ಅವರ ಪ್ರತಿವಾದ ಪತ್ರದ ಪ್ಯಾರಾ 8 ರ ಸೈಟುಗಳನ್ನು ಮಾರಾಟ ಮಾಡಿದ್ದೇವೆ ಎಂದು ಹೇಳಿದ್ದಾರೆ ಎಂದರೆ ಹೇಳಿದ್ದಾರೆ ಆದರೆ ಕ್ರಯಪತ್ರವನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿಲ್ಲ. ನನಗೆ 3 ನೇ ವ್ಯಕ್ತಿಗಳು ಯಾರು ಎಂದು ಪ್ರತಿವಾದಿ ಕ್ರಯಪತ್ರಗಳನ್ನು ಹಾಜರುಪಡಿಸದೇ ಇರುವ ಕಾರಣ ಆ ವ್ಯಕ್ತಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ . ನೀವು ಈಗಾಗಲೇ ವಿಭಾಗ ಪತ್ರವಾಗಿರುವ ಆಧಾರದ ಮೇಲೆ ಈ ದಾವೆಯನ್ನು ಹೂಡಿದ್ದೀರಿ ಎಂದರೆ ಸರಿ . ಸಾಕ್ಷಿ ಮುಂದುವರೆದು ಅದರಲ್ಲಿನ ವಿಭಾಗ ವಾಗದೇ ಇರುವ ಸ್ವತ್ತುಗಳ ಮೇಲೆ ಈ ದಾವೆಯನ್ನುಹೂಡಿದ್ದೇನೆ . ವಿಬಾಗಪತ್ರದಂತೆ ದಾವಾ ಸ್ವತ್ತಿನ ಬಿ ಷೆಡ್ಯೂಲು ಸ್ವತ್ತು ಪ್ರತಿವಾದಿ ನರಸಿಂಹಯ್ಯರವರ ಭಾಗಕ್ಕೆ ಹೋಗಿರುತ್ತದೆ . ಪ್ರತಿವಾದಿ ನರಸಿಂಹಯ್ಯರವರು ಯಾವ ಭಾಷೆಯಲ್ಲಿ ಸಹಿ ಮಾಡುತ್ತಾರೆ ಎಂದರೆ ಕೆಲವೊಂದರಲ್ಲಿ ಕನ್ನಡದಲ್ಲಿ ಮಾಡಿದ್ದಾರೆ ಕೆಲವೂಂದರಲ್ಲಿ ಇಂಗ್ಲೀಷ್ ನಲ್ಲಿ ಮಾಡಿರುತ್ತಾರೆ , ವಿಭಾಗ ಪತ್ರದಲ್ಲಿ ನರಸಿಂಹಯ್ಯ ರವರು ಕನ್ನಡದಲ್ಲಿ ಸಹಿ ಮಾಡಿರಬಹುದು . ನರಸಿಂಹಯ್ಯ ರವರು ಯಾವ ವಿಲ್ ಮಾಡಿದ್ದರು ಎಂದರೆ ಆ ವಿಲ್ ಪ್ರತಿಯನ್ನು ಅವರೇ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು . ಅವರ ಮರಣ ನಂತರ ವಿಲ್ ನಲ್ಲಿ ಅವರ ವಾರಸುದಾರರನ್ನು ಹೇಳಿದ್ದರು ಅದರಂತೆ ಅವರನ್ನು ಪಕ್ಷಗಾರರಂತೆ ಈ ದಾವೆಯಲ್ಲಿ ಮಾಡಿದ್ದರು . ಮೂರು ದಾವೆಗಳು ಕ್ಲಬ್

ಆಗಿದ್ದವು ಯಾವ ದಾವೆಯಲ್ಲಿ ವಿಲ್ ನ್ನು ಹಾಜರುಪಡಿಸಿದದ್ದರು ಎಂದು ನನಗೆ ಗೊತ್ತಿಲ್ಲ . ಈ ದಾವೆಯನ್ನು ವಿಲ್ ನ್ನು ಹಾಜರುಪಡಿಸಿದ್ದರು . ಓ ಎಸ್ 1339/2017, 1666/2019 ಎರಡರಲ್ಲೂ ನನ್ನನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ .

ಯಾವ ಆಧಾರದ ಮೇಲೆ ನರಸಿಂಹಯ್ಯ ರವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೀರಿ ಎಂದರೆ ನರಸಿಂಹಯ್ಯ ರವರ ಮರಣ ನಂತರ ಮಾಡಿದ್ದೇವೆ . ಪ್ರತಿವಾದಿ ನರಸಿಂಹಯ್ಯ ರವರಿಗೆ ಇಂಗ್ಲೀಷ್ ಓದಲು, ಬರೆಯಲು ಬರುತ್ತಿರಲಿಲ್ಲ ಎಂದರೆ ಅವರು ಇಂಗ್ಲೀಷ್ ಓದುತ್ತಿದ್ದರು . ವಿಲ್ ನ್ನು ನಾನು ನೋಡಿಲ್ಲ , ಅದರ ಬಗ್ಗೆ ನನಗೆ ಗೊತ್ತಿಲ್ಲ ಬೇರೆ ಎರಡು ಪ್ರಕರಣಗಳಲ್ಲಿ ಪ್ರತಿವಾದಿ ನರಸಿಂಹಯ್ಯ ರವರ ವಾರಸುದಾರರು ಮಾತನಾಡಿಕೊಳ್ಳುತ್ತ ಇದ್ದರು ಹಾಗಾಗಿ ವಿಲ್ ಬಗ್ಗೆ ಗೊತ್ತಾಯಿತು. ವಿಲ್ ಬಗ್ಗೆ ತಿಳಿದುಕೊಳ್ಳಲು ನಾನು ಪ್ರಯತ್ನ ಮಾಡಲಿಲ್ಲ . ಈ ಹಿಂದೆ ನೀವು ಒಂದು ದಾವೆ ಹಾಕಿದ್ದೀರಿ ಎಂದರೆ ಸರಿ . ಓಎಸ್ 7084/1997 ಆ ದಾವೆ ರಾಜಿಯಾಗಿತ್ತು . ಓಎಸ್ 7084/1997 ನ್ನು ಸಹ ನೀವು ವಿಭಾಗಕ್ಕಾಗಿ ಹಾಕಿದ್ದೀರಿ ಎಂದರೆ ಸರಿ . ನಿಪಿ 4 ನೀವು

ಹಾಜರುಪಡಿಸಿರುವ ಓಎಸ್ 7084/1997 ರ ಆದೇಶ ಪ್ರತಿಗಳ ಪ್ರಕಾರ ದಾವೆ ವಜಾ ಆಗಿತ್ತು ಎಂದರೆ ಸಾಕ್ಷಿ ನಿಪಿ 4 ನ್ನು ಪರಿಶೀಲಿಸಿ ವಜಾ ಆಗಿತ್ತು ಎಂದು ಇದೆ ಎಂದು ಹೇಳಿದ ಮೇರೆಗೆ ನಿಪಿ 4 ರ ಆ ಭಾಗವನ್ನು ನಿಪಿ **4 (**ಎ **)** ಎಂದು ಗುರುತಿಸಲಾಯಿತು. ನಂತರ ಸಾಕ್ಷಿ ಮುಂದುವರೆದು ನಾವು ಮೆಮೋ ಹಾಕಿದ್ದೆವು . ಆ ಮೆಮೋದಲ್ಲಿ ರಾಜಿಯಾಗಿತ್ತು ಆ ಮೆಮೋ ಪ್ರತಿಯನ್ನು ನಿಪಿ 5 ನ್ನಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿತ್ತು .

ವಾದ ಪತ್ರದ ಅಂಶಗಳನ್ನು ನಾನು ಹೇಳಿ ಬರೆಸಿದ್ದು . ಸ್ವತ್ತು ಕನ್ವರ್ಷನ್ ಆದ ಮೇಲೆ 1992 ರಲ್ಲಿ ಲೇಔಟ್ ಮಾಡಿದ್ದರು . ಪ್ರತಿವಾದಿ ನರಸಿಂಹಯ್ಯ ರವರು ಮರಣ ನಂತರ ವಿಲ್ ಮಾಡಿದ್ದಾರೆ ಎಂದು ಯಾವಾಗ ನಿಮಗೆ ಗೊತ್ತಾಯಿತು ಎಂದರೆ ಅವರು ಮಾತನಾಡಿಕೊಳ್ಳುತ್ತಾ ಇದ್ದರು ಅವಾಗ ಗೊತ್ತಾಯಿತು . ಆ ವಿಲ್ ಗೂ ನನಗೂ ಸಂಬಂಧವಿಲ್ಲ. ವಿಲ್ ವಿಚಾರ ಯಾವಾಗ ಗೊತ್ತಾಯಿತು ಎಂದು ಹೇಳಲು ನನಗೀಗ ನೆನಪಿಲ್ಲ. ವಿಲ್ ನಲ್ಲಿ ದಾವಾ ಸ್ವತ್ತಿನ ಷೆಡ್ಯೂಲುಗಳು ಸೇರಿವೆ ಎಂದರೆ ನನಗೆ ಗೊತ್ತಿಲ್ಲ. ನೀವು ಈ ದಾವಾ ಸ್ವತ್ತಿಗೆ ಕರಾರು ಪತ್ರ ಮಾಡಿಕೊಟ್ಟಿದ್ದೀರಾ ಎಂದರೆ ಇಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು

ತೋರಿಸಲಾಗಿ ಆ ದಾಖಲೆಯನ್ನು ಸಾಕ್ಷಿ ಒಪ್ಪಿ ದ ಮೇರೆಗೆ ನಿಡಿ **1** ಎಂದು ಗುರುತಿಸಲಾಯಿತು. ಅದರಲ್ಲಿ ನಾವು ಯಾವುದೇ ಹಣ ಪಡೆದುಕೊಂಡಿಲ್ಲ . ಯಾವ ಉದ್ದೇಶಕ್ಕೆ ನಿಡಿ 1 ದಾಖಲೆಯನ್ನು ಮಾಡಿದ್ದೀರಿ ಎಂದರೆ ನನಗೆ ಒಬ್ಬರ ಸಹಾಯ ಬೇಕಿತ್ತು ಆದ ಕಾರಣ ನಿಡಿ 1 ದಾಖಲೆಯನ್ನು ಮಾಡಿಸಿದ್ದೆವು ಅದರಂತೆ ಯಾವುದೇ ಹಣ ಪಡೆದುಕೊಂಡಿಲ್ಲ . ಯಾವ ರೀತಿ ಸಹಾಯಕ್ಕೆ ನಿಡಿ 1 ದಾಖಲೆಯನ್ನು ಮಾಡಿಕೊಂಡಿದ್ದೀರಿ ಎಂದರೆ ಜಮೀನಿನ ದಾಖಲೆಗಳನ್ನು ಪಡೆದುಕೊಳ್ಳಲು , ದಾವಾ ಸ್ವತ್ತಿನಲ್ಲಿ ಯಾರಾದರೂ ಬಂದು ಹೋಗುತ್ತಾರಾ ಎಂದು ನೋಡಿಕೊಳ್ಳಲು , ಬೇರೆ ಏನಾದರೂ ಅವಶ್ಯಕತೆ ಬಿದ್ದರೆ ಎಂದು ನಿಡಿ 1 ನ್ನು ಮಾಡಿಕೊಂಡಿದ್ದೆವು . ನಿಡಿ 1 ರಲ್ಲಿ ನೀವು ಹೇಳಿದಂತೆ ಏನಾದರೂ ಸಹಾಯಕ್ಕೆಂದು ಜಮೀನಿನ ದಾಖಲೆಗಳನ್ನು ಪಡೆದುಕೊಳ್ಳಲು , ದಾವಾ ಸ್ವತ್ತಿನಲ್ಲಿ ಯಾರಾದರೂ ಬಂದು ಹೋಗುತ್ತಾರಾ ಎಂದು ನೋಡಿಕೊಳ್ಳಲು ಎಂದು ನಮೂದಾಗಿದೆಯೇ ಎಂದರೆ ಸಾಕ್ಷಿ ನಿಡಿ 1 ನ್ನು ಪರಿಶೀಲಿಸಿ ಇಲ್ಲ ಎಂದು ಹೇಳುತ್ತಾರೆ . ನಿಡಿ 1 ದಾಖಲೆಯಲ್ಲಿ ಬರೆದಿರುವುದು ಸತ್ಯ ಎಂದರೆ ಸರಿಯಲ್ಲ.

ಪ್ರಸ್ತುತ ಈಗಲೂ ದಾವಾ ಸ್ವತ್ತಿನ ಮೇಲೆ ವರ್ಕ್ ಬೋರ್ಡ್ ರವರು ಕೇಸ್ ಹಾಕಿದ್ದಾರೆ ಅದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪೆಂಡಿಂಗ್ ಇದೆ ಎಂದರೆ ಸರಿ . ಸಾಕ್ಷಿಗೆ ಒಂದು ಪ್ರತಿಯನ್ನು ತೋರಿಸಿ ಇದೇ ಕೇಸ ಎಂದರೆ ಹೌದು ಎಂದು ಸಾಕ್ಷಿ ಒಪ್ಪಿ ದ ಮೇರೆಗೆ ದಾಖಲೆಯ ಪ್ರತಿಯನ್ನು ನಿಡಿ **2** ಎಂದು ಗುರುತಿಸಲಾಯಿತು. ನೀವು ವರ್ಕ್ ಬೋರ್ಡ್ ಮೇಲೆ ಹಾಕಿರುವ ರಿಟ್ ಪಿಟಿಷನ್ ಯಾವ ಕಾರಣಕ್ಕೆ ಹಾಕಿದ್ದೀರಿ ಎಂದರೆ 2010 ರಲ್ಲಿ ವರ್ಕ್ ಬೋರ್ಡ್ ನವರು ದಾವಾ ಆಸ್ತಿಯನ್ನು ವರ್ಕ್ ಬೋರ್ಡ್ ಎಂದು ನೋಟೀಫಿಕೇಷನ್ ಮಾಡಿದ್ದರು ಆದ ಕಾರಣ ಅದನ್ನು ಪ್ರಶ್ನಿಸಿ ರಿಟ್ ಪಿಟಿಷನ್ ನ್ನು ಮಾನ್ಯ ಉಚ್ಚನ್ಯಾಯಾಲಯದಲ್ಲಿ ಹಾಕಿದ್ದರು . ನೀವು ಈ ದಾವೆಯನ್ನು ಹೂಡುವ ಕಾಲಕ್ಕೆ ಆಗಲೇ ವರ್ಕ್ ಬೋರ್ಡ್ ರವರು ದಾವಾ ಸ್ವತ್ತಿನ ಸ್ವಾ ಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2010 ರಲ್ಲಿ ನೋಟೀಫಿಕೇಷನ್ ಆಗಿತ್ತು ಸ್ವತ್ತಿನ ಸ್ವಾ ಧೀನ ನಮ್ಮ ಬಳಿ ಇತ್ತು .

ಮುಂದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಿಶಾ ರಾಣಿ ಎ. ಸಿ)
III ನೇ ಎ.ಸಿ.ಸಿ & ಎಸ್.ಜೆ,
ಬೆಂಗಳೂರು.